Kerala Gazette No. 25 dated 23rd June 2020.

**PART I** **Section iii**

# ಕೇರಳ ಸರಕಾರ

ಕಾನೂನು (ಶಾಸನ ರಚನೆ-ಇ) ಇಲಾಖೆ

## ಅಧಿಸೂಚನೆ

ನಂಬ್ರ 25297/ಲೆಗ್. ಇ1/2017/ಕಾನೂನು. ತಿರುವನಂತಪುರಂ, 2018 ಜುಲೈ 3, / 1193 ಮಿಥುನ 19/ / 1940 ಆಷಾಢ 12.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2018 ಜುಲೈ 3ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

ಕಾನೂನು ಕಾರ್ಯದರ್ಶಿ.

G. 60/2018/GPC.

## 2018ರ 15ನೇ ನಂಬ್ರ ಅಧಿನಿಯಮ

## 2018ರ ಕೇರಳ ಉಚ್ಚ ನ್ಯಾಯಾಲಯ (ತಿದ್ದುಪಡಿ) ಅಧಿನಿಯಮ

1958ರ ಕೇರಳ ಉಚ್ಚ ನ್ಯಾಯಾಲಯ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1958ರ ಕೇರಳ ಉಚ್ಚ ನ್ಯಾಯಾಲಯ ಅಧಿನಿಯಮವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2018ರ ಕೇರಳ ಉಚ್ಚ ನ್ಯಾಯಾಲಯ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು 2017 ಡಿಸೆಂಬರ್ 15ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 3ನೇ ವಿಭಾಗಕ್ಕಿರುವ ತಿದ್ದುಪಡಿ.—1958ರ ಕೇರಳ ಉಚ್ಚ ನ್ಯಾಯಾಲಯ ಅಧಿನಿಯಮ (1959ರ 5)ದ (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ, 3ನೇ ವಿಭಾಗದ (13)ನೇ ಖಂಡದಲ್ಲಿ,—

(i) ಉಪಖಂಡ (ಬಿ)ಯಲ್ಲಿ, "ಒಂದು ಲಕ್ಷ ರೂಪಾಯಿಗಳು" ಎಂಬ ಪದಗಳ ಬದಲು "ನಲುವತ್ತು ಲಕ್ಷ ರೂಪಾಯಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಉಪಖಂಡ (ಜಿ)ಯ ನಂತರ, ಈ ಕೆಳಗಿನ ಉಪಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎಚ್) ಮೋಟಾರ್ ಆಕ್ಸಿಡೆಂಟ್ಸ್ ಕ್ಲೈಮ್ಸ್ ಟ್ರಿಬ್ಯೂನಲ್ ಹೊರಡಿಸಿದ ಒಂದು ತೀರ್ಪಿನಿಂದ.".

3. ಇತ್ಯರ್ಥವಾಗದ ಮೇಲ್ಮನವಿಗಳು, ವ್ಯಾಜ್ಯಗಳು ಮತ್ತು ಇತರ ವ್ಯವಹರಣೆಗಳಿಗೆ ಸಂಬಂಧಿಸಿದ ವಿಶೇಷ ಉಪಬಂಧ.—ಪ್ರಧಾನ ಅಧಿನಿಯಮದಲ್ಲಿ ಅಥವಾ ತತ್ಕಾಲ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ 3ನೇ ವಿಭಾಗದ (13)ನೇ ಖಂಡದ (ಬಿ) ಮತ್ತು (ಎಚ್) ಉಪಖಂಡಗಳ ಉಪಬಂಧಗಳು, ಈ ಅಧ್ಯಾದೇಶದ ಪ್ರಾರಂಭದ ದಿನಾಂಕಕ್ಕಿಂತ ಮೊದಲು ಹೂಡಿದ ಹಾಗೂ ವಿಲೇವಾರಿಯಾಗದಂತಹ ಎಲ್ಲಾ ವ್ಯಾಜ್ಯಗಳಿಗೆ, ಮೇಲ್ಮನವಿಗಳಿಗೆ ಮತ್ತು ಇತರ ವ್ಯವಹರಣೆಗಳಿಗೆ ಹಾಗೂ 1988ರ ಮೋಟಾರ್ ವೆಹಿಕಲ್ಸ್ ಆಕ್ಟ್ (1988ರ 59ನೇ ಕೇಂದ್ರ ಅಧಿನಿಯಮ)ನ ಪ್ರಕಾರ, ಆಯಾಯ ವಿಷಯದಂತೆ, ಪರಿಹಾರಕ್ಕಾಗಿ ಸಲ್ಲಿಸಿದ ಅರ್ಜಿಗಳಿಗೆ ಅನ್ವಹಿಸುವುದಾಗಿದೆ ಮತ್ತು ಪ್ರಸ್ತುತ ದಿನಾಂಕದಂದು ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಇತ್ಯರ್ಥವಾಗದೆ ಇರುವಂತಹ ವ್ಯಾಜ್ಯಗಳ ಅಥವಾ ಇತರ ವ್ಯವಹರಣೆಗಳ ವಿಷಯದ ಮೊತ್ತವು ಅಥವಾ ಮೌಲ್ಯವು ನಲುವತ್ತು ಲಕ್ಷ ರೂಪಾಯಿಗಿಂತ ಮೀರದ ಎಲ್ಲಾ ಮೇಲ್ಮನವಿಗಳು ಹಾಗೂ ಮೋಟಾರ್ ಆಕ್ಸಿಡೆಂಟ್ಸ್ ಕ್ಲೈಮ್ಸ್ ಟ್ರಬ್ಯೂನಲ್ ಹೊರಡಿಸಿದ ತೀರ್ಪುಗಳ ವಿರುದ್ಧ ಸಲ್ಲಿಸಿದಂತಹ ಎಲ್ಲಾ ಮೇಲ್ಮನವಿಗಳು ಏಕಪೀಠಕ್ಕೆ ಹಸ್ತಾಂತರಿಸತಕ್ಕದ್ದು ಮತ್ತು ಏಕಪೀಠವು ಇತ್ಯರ್ಥ ಮಾಡತಕ್ಕದ್ದು:

ಆದರೆ ಪ್ರಸ್ತುತ ಉಪಬಂಧವು ಪ್ರಧಾನ ಅಧಿನಿಯಮದ 5ನೇ ವಿಭಾಗದ ಪ್ರಕಾರ ವಿಭಾಗೀಯ ಪೀಠದ ಮುಂದೆ ಇತ್ಯರ್ಥವಾಗದೆ ಇರುವಂತಹ ಮೇಲ್ಮನವಿಗಳಿಗೆ ಅನ್ವಯಿಸುವುದಿಲ್ಲ.

4. ರದ್ಧತಿ ಮತ್ತು ರಕ್ಷಣೆ.— (1) 2018ರ ಕೇರಳ ಉಚ್ಚ ನ್ಯಾಯಾಲಯ (ತಿದ್ದುಪಡಿ) ಅಧ್ಯಾದೇಶ (2017ರ 22)ವು ಈ ಮೂಲಕ ರದ್ದುಗೊಂಡಿರುವುದು.

(2) ಅಂತಹ ರದ್ಧತಿಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

---